# ಸಾಮೂಹಿಕ ಕಲ್ಯಾಣ ಮಹೋತ್ಸವ

**ಚಿತ್ರದುರ್ಗ, ಅ. 5** - ಸಂಸಾರ ಸಸಾರವಾಗಬೇಕೆಂದರೆ ಅದಕ್ಕೊಂದು ಅರ್ಥ ಬೇಕು. ಯಾರ ವಿವಾಹದಲ್ಲಿ ವ್ಯವಹಾರ ಇರುತ್ತದೆಯೋ ಅದು ವಿವಾದವಾಗುತ್ತದೆ. ಸಂಸಾರದ ಭಾರ ತಿಳಿಯಾಗಬೇಕಾದರೆ ಆದರ್ಶದ ಸ್ಪರ್ಶವಾಗಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ ಸಹಯೋಗದಲ್ಲಿ ನಡೆದ ಮೂವತ್ತನೇ ವರ್ಷದ ಹತ್ತನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಗಳು, ಸಂಸಾರ ಬಹಳ ಭಾರ. ಅನೇಕ ತೊಡಕುಗಳು, ತೊಂದರೆಗಳು, ತಾಪತ್ರಯಗಳು ಎದುರಾಗುತ್ತವೆ. ಮಾನವನ ಬದುಕಿನಲ್ಲಿ ತೊಂದರೆಗಳು ಸಾಮಾನ್ಯ. ಸಂಸಾರವೆಂಬ ಹೆಣ ಬಿದ್ದರೆ ತಿನಲು ನಾಯಿಗಳು ನೋಡಾ? ಇಂದು ಸಂಸಾರದಲ್ಲಿಯೂ ಅನೇಕ ರೀತಿಯ ಭಂಡಾಟ ಇದೆ. ಆಗ ಸಂಸಾರ ಭಾರವಾಗುತ್ತದೆ. ಸಂಸಾರಕ್ಕೆ ಮತ್ತೊಂದು ಹೆಸರು ಪ್ರಪಂಚ.  12ನೇ ಶತಮಾನದ ಶರಣರು ಆದರ್ಶಕ್ಕೆ ಹತ್ತಿರವಿದ್ದರು. ಆದರೆ 21ನೇ ಶತಮಾನದ ಜನರು ಆದರ್ಶದಿಂದ ದೂರ ಉಳಿಯುತ್ತಿದ್ದಾರೆ. ಕಾಲ ಬದಲಾವಣೆ ಆಗುತ್ತಿಲ್ಲ. ಮಾನವ ಬದಲಾಗುತ್ತಿದ್ದಾನೆ. ನಮ್ಮೊಳಗೆ ಪರಮಾರ್ಥ ಅಳವಡಿಸಿಕೊಳ್ಳಬೇಕೆಂದರು.

ಭೋವಿಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು ಮಾತನಾಡಿ, ಸಂಸಾರ ಎನ್ನುವುದು ಬಹುತೇಕರಿಗೆ ಚೆನ್ನಾಗಿಲ್ಲ ಅನ್ನಿಸುತ್ತಿದೆ. ಅಂದರೆ ತೇಲಲೀಯದು ಗುಂಡು, ಮುಳುಗಲೀಯದು ಬೆಂಡು ಎನ್ನುವ ಹಾಗೆ ಸಂಸಾರ. ಸಂಸಾರದಲ್ಲಿ ಸಾವಲುಗಳಿವೆಯೇ ಎಂಬುದನ್ನು ಗಮನಿಸಬೇಕು. ನಮ್ಮ ಬದುಕನ್ನು ಸರಿ ಮಾಡಿಕೊಳ್ಳಬೇಕು. ಸಂಸಾರದಲ್ಲಿ ಸದ್ಗತಿ ಇದೆ. ಒಬ್ಬರನ್ನೊಬ್ಬರು ಅರ್ಥೈಸಿಕೊಂಡು ನಡೆಯಬೇಕು ಎಂದು ತಿಳಿಹೇಳಿದರು.

ಜಿ.ಪಂ. ಮುಖ್ಯಕಾರ್ಯನಿರ್ವಹಣಾಧಿಕಾರಿ ಟಿ.ಯೋಗೇಶ್ ಮಾತನಾಡಿ, ಶ್ರೀಗಳು ಮಾಡುತ್ತಿರುವ ಕಾರ್ಯಗಳು ಅನನ್ಯ. ಸಾಮೂಹಿಕ ವಿವಾಹ ಅನ್ನುವುದೇ ಅರ್ಥಪೂರ್ಣ. ಸಮಾಜಕ್ಕೆ ಸಂಸ್ಕøತಿ ಎನ್ನುವುದು ಶಾಶ್ವತ. ಸಂಸ್ಕøತಿಯನ್ನು ಪೆ‍್ರೀಷಣೆ ಮಾಡುವುದರಲ್ಲಿ ಶ್ರೀಮಠದ ಕಾರ್ಯಗಳು ಇತರರಿಗೆ ಮಾದರಿಯಾಗಿವೆ ಎಂದರು.

ಇದೇ ಸಂದರ್ಭದಲ್ಲಿ 5 ಜೋಡಿಗಳು ದಾಂಪತ್ಯಕ್ಕೆ ಕಾಲಿಟ್ಟರು. ವೀರಶೈವ ಸಮಾಜದ ಅಧ್ಯಕ್ಷ ಎನ್. ಜಯಣ್ಣ ವೇದಿಕೆಯಲ್ಲಿದ್ದರು. ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಪೈಲ್ವಾನ್ ತಿಪ್ಪೇಸ್ವಾಮಿ, ಎನ್. ತಿಪ್ಪಣ್ಣ ಮೊದಲಾದವರಿದ್ದರು. ಎಂ. ವೀರಭದ್ರಪ್ಪ ಸ್ವಾಗತಿಸಿದರು. ಜ್ಞಾನಮೂರ್ತಿ ನಿರೂಪಿಸಿದರು.


ಮೂವತ್ತನೇ ವರ್ಷದ ಹತ್ತನೇ
ದಿನಾಂಕ : 05-10-2020


ಮೂವತ್ತನೇ ವರ್ಷದ
ಸಾಮೂಹಿಕ ಕಲ್ಯಾಣ


ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ,
ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ.) ಚಿತ್ರದುರ್ಗ
ಮೂವತ್ತನೇ ವರ್ಷದ ಹತ್ತನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ

